## ಕರ್ನಾಟಕವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 920 |
| ಸದಸ್ಯರ ಹೆಸರು | ಡಾ: ಧನಂಜಯ ಸರ್ಜಿ<br>(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 17.12.2024 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ<br>ತೋಟಗಾರಿಕೆ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಮರಳು ಗಣಿಗಾರಿಕೆಯಿಂದ ಬರುತ್ತಿರುವ ತೆರಿಗೆ ಹಣ ಎಷ್ಟು; | ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ ಮರಳು ಗಣಿಗಾರಿಕೆಯಿಂದ ಸಂಗ್ರಹವಾದ ರಾಜಧನ ಹೆಚ್ಚುವರಿ ನಿಯತಕಾಲಿಕ ಮೊತ್ತ, ಹೆಚ್ಚುವರಿ ಮೊತ್ತ ಮತ್ತು DMF ಮೊತ್ತ ವಿವರಗಳು ಈ ಕೆಳಕಂಡತಿವೆ.<br>(₹ ಲಕ್ಷಗಳಲ್ಲಿ )<br><table><tr><td>ವರ್ಷ</td><td>ಮರಳಿನ ಪ್ರಮಾಣ (ಮೆಟ್ರಿಕ್ ಟನ್ ಗಳಲ್ಲಿ )</td><td>ಸಂಗ್ರಹಿಸಲಾದ ರಾಜಧನ ಹಾಗೂ ಇತರೆ ಮೊತ್ತಗಳು</td><td>ಸಂಗ್ರಹಿಸಲಾದ DMF ಮೊತ್ತ</td></tr><tr><td>2021-22</td><td>3038779</td><td>8778.50</td><td>243.56</td></tr><tr><td>2022-23</td><td>3040621</td><td>8445.59</td><td>243.44</td></tr><tr><td>2023-24</td><td>3091720</td><td>5944.22</td><td>235.68</td></tr></table> |
| ಆ) | ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ 5 ವರ್ಷಗಳಿಂದ ಅಕ್ರಮ ಗಣಿಗಾರಿಕೆಯಿಂದಾಗಿ ರಾಜ್ಯ ಸರ್ಕಾರಕ್ಕೆ ಆಗುತ್ತಿರುವ ತೆರಿಗೆ ನಷ್ಟ ಎಷ್ಟು; ಅಕ್ರಮ ಗಣಿಗಾರಿಕೆ ತಡೆಯುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವರ್ಷವಾರು ವಿವರ ನೀಡುವುದು) | ಬಂದಿರುತ್ತದೆ.<br>• ರಾಜ್ಯದಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಯನ್ನು ನಿಯಂತ್ರಿಸಲು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮರಳು ಸಮಿತಿ ಹಾಗೂ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಯನ್ನು ರಚಿಸಲಾಗಿರುತ್ತದೆ.<br>• ಮೇಲ್ಕಂಡ ಸಮಿತಿಯಲ್ಲಿ ಕಂದಾಯ, ಪೊಲೀಸ್, ಅರಣ್ಯ, ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ಗಣಿ ಮತ್ತು ಭೂವಿಜ್ಞಾನ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ.<br>• ಸದರಿ ಇಲಾಖೆಗಳ ಅಧಿಕಾರಿಗಳಿಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆ ಗಳನ್ನು ತಡೆಯಲು ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಕಲಂ 4(1), 4(1-A) ಮತ್ತು ಕಲಂ 21 ಮತ್ತು 22 ರಡಿ ಹಾಗೂ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, |

| | | |
|---|---|---|
| | | -1994 ರ ನಿಯಮ 31-R (12) ರಡಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲು ಅಧಿಕಾರ ಪ್ರತ್ಯಾಯೋಜಿಸ ಲಾಗಿರುತ್ತದೆ.<br>• ಮುಂದುವರೆದು, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 43-A ರಂತೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳಿಗೆ ದಂಡ ವಿಧಿಸಿ ವಸೂಲು ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br>• ಆಯಾ ಜಿಲ್ಲಾ ವ್ಯಾಪ್ತಿಯಲ್ಲಿ ಜಿಲ್ಲಾ ಹಾಗೂ ಮರಳು ಸಮಿತಿಯಿಂದ ಚಾಲಿತದಳ ತಂಡವನ್ನು ರಚಿಸಿಕೊಂಡು ಅನಧಿಕೃತ ಮರಳು ಗಣಿಗಾರಿಕೆ/ಸಾಗಾಣಿಕೆ ಚಟುವಟಿಕೆ ಗಳನ್ನು ನಿಯಂತ್ರಿಸಲು ಕ್ರಮ ವಹಿಸಲಾಗುತ್ತಿದೆ.<br>• ಮರಳು ಹಾಗೂ ಇತರೆ ಉಪಖನಿಜ ಸಾಗಾಣಿಕೆ ವಾಹನಗಳ ಚಲನವಲನಗಳ ಮೇಲೆ ನಿಗಾವಹಿಸಲು ಕೇಂದ್ರೀಕೃತ One state One GPS ವ್ಯವಸ್ಥೆಯನ್ನು ಜಾರಿಗೊಳಿಸಲಾಗಿ ರುತ್ತದೆ.<br>• ಅನಧಿಕೃತ ಮರಳು ಗಣಿಗಾರಿಕೆ/ಸಾಗಾಣಿಕೆ ಚಟುವಟಿಕೆ ಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು "ಖನಿಜ ಸಂರಕ್ಷಣಾ ಪಡೆ"ಯನ್ನು ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ.<br>• ಮೇಲ್ಕಂಡಂತೆ ರಾಜ್ಯದಲ್ಲಿ ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆ/ದಾಸ್ತಾನು ನಡೆಸುತ್ತಿರುವವರ ವಿರುದ್ಧ ಕ್ರಮ ವಹಿಸಲಾಗಿದ್ದು, ಕಳೆದ 5 ವರ್ಷಗಳಲ್ಲಿ ಅಕ್ರಮ ಮರಳು ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ವಿರುದ್ಧ ಕೈಗೊಂಡ ಕ್ರಮದ ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |
| ಇ. | ರಾಜ್ಯದಲ್ಲಿ ಪ್ರತಿ ಟನ್ ಮರಳಿಗೆ ಸರ್ಕಾರ ಪ್ರಸ್ತುತ ನಿಗದಿಪಡಿಸಿ ರುವ ದರವೆಷ್ಟು; ಸರ್ಕಾರ ನಿಗದಿಪಡಿಸಿ ರುವ ದರಕ್ಕೂ ಗ್ರಾಹಕರಿಗೆ ಮಾರುಕಟ್ಟೆಯಲ್ಲಿ ಸಿಗುತ್ತಿರುವ ಮರಳಿನ ದರಕ್ಕೂ ಬಹಳ ವ್ಯತ್ಯಾಸವಿದ್ದು, ಇದರಿಂದ ಗ್ರಾಹಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿ ದ್ದಲ್ಲಿ, ಸರ್ಕಾರ - | • ಸರ್ಕಾರದ ಆದೇಶ ಸಂಖ್ಯೆ ಸಿಐ 344 ಎಂಎಂಎನ್ 2019 (ಭಾಗ-2), ದಿನಾಂಕ 10.07.2020 ರಂತೆ I, II ಮತ್ತು III ನೇ ಶ್ರೇಣಿಯ ಹಳ್ಳಗಳ ಪಾತ್ರಗಳಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ವಿಲೇವಾರಿ ಮಾಡುವ ಪ್ರತಿ ಮೆಟ್ರಿಕ್ ಟನ್ ಮರಳಿಗೆ ₹300/-ಗಳ ಮಾರಾಟ ದರ ನಿಗದಿಪಡಿಸಲಾಗಿರುತ್ತದೆ. ಗ್ರಾಮ ಪಂಚಾಯಿತಿ ಮೂಲಕ ಪಡೆಯುವ ಮರಳನ್ನು ಸ್ಥಳೀಯ ಗ್ರಾಹಕರು ತಮ್ಮ ಸ್ವಂತ ಖರ್ಚಿನಲ್ಲಿ ಸಾಗಾಣಿಕೆ ಮಾಡಿಕೊಳ್ಳಬೇಕಾಗಿರುತ್ತದೆ.<br>• ಸರ್ಕಾರದ ಆದೇಶ ಸಂಖ್ಯೆ ಸಿಐ-ಎಂಎಂಎನ್/115/2024 ದಿನಾಂಕ 03.12.2024 ರಂತೆ, IV, V ಮತ್ತು ಉನ್ನತ ಶ್ರೇಣಿಯ ಹಳ್ಳ / ನದಿಗಳ ಪಾತ್ರಗಳಲ್ಲಿ ಹಾಗೂ ಅಣೆಕಟ್ಟು ಜಲಾಶಯ ಮತ್ತು ಅಣೆಕಟ್ಟೆನ ಹಿನ್ನೀರಿನ ನದಿ ಪಾತ್ರಗಳಲ್ಲಿ ಮರಳು ಗಣಿಗಾರಿಕೆ ನಡೆಸಿ, ಸಾರ್ವಜನಿಕರಿಗೆ ಮತ್ತು ಸರ್ಕಾರಿ ಕಾಮಗಾರಿಗಳಿಗೆ ಪೂರೈಸುವ ಮರಳಿಗೆ ನದಿ ಪಾತ್ರಗಳಲ್ಲಿ ಗುರುತಿಸಿರುವ ಮರಳು ಬ್ಲಾಕ್‌ಗಳನ್ನು ಟೆಂಡರ್ ಮೂಲಕ ಗುತ್ತಿಗೆ ಪಡೆದು ಮರಳು ಸ್ಟಾಕ್‌ಯಾರ್ಡ್ ಪ್ರದೇಶಗಳಿಂದ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸುವ- |

. . . 3

| | | |
|---|---|---|
| | -ಕೈಗೊಂಡಿರುವ ಕ್ರಮಗಳೇನು? | -ಮರಳಿಗೆ ₹850/-ಗಳ ಮಾರಾಟ ದರವನ್ನು ನಿಗದಿಪಡಿಸಲಾಗಿರುತ್ತದೆ.<br>• ಸರ್ಕಾರದಿಂದ ನಿಗದಿಪಡಿಸಲಾಗಿರುವ ಮರಳಿನ ಮಾರಾಟ ದರವು ಸ್ಟಾಕ್‌ಯಾರ್ಡ್‌ನ ದರವಾಗಿರುತ್ತದೆ. ಗ್ರಾಹಕರುಗಳು ಸ್ಟಾಕ್‌ಯಾರ್ಡ್‌ನಿಂದ ಮರಳು ಸಾಗಾಣಿಕೆ ಮಾಡಿಕೊಳ್ಳಲು ಸಾಗಾಣಿಕೆ ವೆಚ್ಚವು ಪ್ರತ್ಯೇಕವಾಗಿರುವುದರಿಂದ ಸರ್ಕಾರದಿಂದ ನಿಗದಿಪಡಿಸಿರುವ ದರಕ್ಕೂ ಮತ್ತು ಮಾರುಕಟ್ಟೆ ದರಕ್ಕೂ ವ್ಯತ್ಯಾಸವಿರುತ್ತದೆ. |

ಸಂಖ್ಯೆ ಸಿಐ -ಎಂಎಂಎನ್/304/2024

S. S. Mallikarjun

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.